## ಸಸಿತೋಟ

ಅಮೆರಿಕಾದ ಲಾಸ್ ವೇಗಾಸ್‌ನಲ್ಲಿ ಜರುಗಿದ ವಾರ್ಷಿಕ ಎಲೆಕ್ಟ್ರಾನಿಕ್ ಶೋನಲ್ಲಿ ಜನ ಮಸಾಜ್ ಕುರ್ಚಿಯಲ್ಲಿ ಕೂತು ಖುಷಿಪಟ್ಟರಂತೆ. ಇದು ಅಂತಿಂತಹ ಕುರ್ಚಿಯಲ್ಲ, ಬಣ್ಣ ಬಣ್ಣದ ಕನಸು ತೋರಿಸುವ ಕುರ್ಚಿ. ಭ್ರಮೆಗಳನ್ನೆಲ್ಲ ವಾಸ್ತವ ಎಂಬಂತೆ ತೋರಿಸುತ್ತದೆಯಂತೆ. ವಾಸ್ತವದಲ್ಲಿ ಕೈಗೆ ಸಿಗದ ಸ್ನೇಹಿತ/ ಸ್ನೇಹಿತೆಯ ಜೊತೆ ಕಟ್ಟಿಕೊಂಡ ಕಲ್ಪನೆಗಳೆಲ್ಲ ಇಲ್ಲಿ ಕೆಲವು ಕ್ಷಣಗಳಾದರೂ ಸಾಕಾರಕ್ಕೆ ಇಳಿಯುವಂತಹ ಭ್ರಮೆ ಹುಟ್ಟಿಸುತ್ತದೆಯಂತೆ.



ಅರಣ್ಯದಲ್ಲಿ ಹುಲಿ ಎದುರಾದರೆ ಏನು ಮಾಡುತ್ತಾರೆ ಹೇಳಿ. ಎರಡೂ ಕಾಲುಗಳಿಗೆ ಬುದ್ಧಿ ಹೇಳಿ ಓಟ ಕೀಳು ಎನ್ನಲು ರಿಮೋಟ್ ಕಂಟ್ರೋಲ್ ಬೇಡ ಅಲ್ಲವೇ? ಆದರೆ ಮಧ್ಯಪ್ರದೇಶದ ಸಾತ್ಪುರ್ ರಕ್ಷಿತಾರಣ್ಯದಲ್ಲಿ ಹುಲಿ ಗಣತಿಗೆ ತೆರಳಿದ್ದ ಅರಣ್ಯ ಇಲಾಖೆಯ ಮಹಿಳಾ ಸಿಬ್ಬಂದಿಯೊಬ್ಬರು ದೃಷ್ಟಿಯುದ್ಧದಿಂದಲೇ ಹುಲಿಯನ್ನು ಹೆದರಿಸಿ ಓಡಿಸಿದ್ದಾರಂತೆ. ಎದುರಾದ ಹುಲಿಯನ್ನು ಒಂದೂವರೆ ಗಂಟೆ ಕಾಲ ದಿಟ್ಟಿಸಿ ನೋಡಿದ ಈ ಮಹಿಳೆಯ ಕಣ್ಣೋಟಕ್ಕೆ ಹೆದರಿ ಹುಲಿಯೇ ಕಾಲಿಗೆ ಬುದ್ಧಿ ಹೇಳಿತಂತೆ.

ಅಮೆರಿಕಾದ ಅತ್ಯಂತ ಪುರಾತನ ಸಿನಗಾಗ್. ಯಹೂದಿಗಳ ಈ ಪವಿತ್ರ ಕಟ್ಟಡವನ್ನು ತಳಪಾಯದ ಸಮೇತ ಎಬ್ಬಿಸಿ ಸ್ಥಳಾಂತರಿಸಲಾಗಿದೆ. ಭಾರತದಲ್ಲಾದರೆ ಶಿಸ್ತುಬದ್ಧವಾಗಿ ಒಂದೊಂದೇ ಕಲ್ಲನ್ನು ಎಬ್ಬಿಸಿ ಯಾರದೋ ಮನೆಯ ತಳಪಾಯವಾಗುತ್ತಿತ್ತು.



ರಾಷ್ಟ್ರೀಯ ಪಕ್ಷ ಬಿಜೆಪಿ ಇತ್ತೀಚೆಗೆ ದೆಹಲಿಯಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ 3000 ಕೆಜಿ ಆಹಾರ ಧಾನ್ಯದಲ್ಲಿ ಕಿಚಡಿ ತಯಾರಿಸಿ ದಾಖಲೆ ನಿರ್ಮಿಸಿತಂತೆ. ಚುನಾವಣೆ ತಯಾರಿ ಜೊತೆ ಈ ದಾಖಲೆಯ ತಯಾರಿಯ ಹಿನ್ನಲೆ ಗೊತ್ತಾಗಿಲ್ಲ. ಆದರೆ 2017ರಲ್ಲಿ ಖ್ಯಾತ ಶೆಫ್ ಸಂಜೀವ್ ಕಪೂರ್ 918 ಕೆಜಿ ಕಿಚಡಿ ತಯಾರಿಸಿ ಮಾಡಿದ್ದ ದಾಖಲೆಯನ್ನಂತೂ ಮುರಿಯಲಾಗಿದೆ.





ಪಾಕಿಸ್ತಾನದ ಜಾಂಝೆಬ್ ಪಾರಿವಾಳ ಸಾಕುವುದರಲ್ಲಿ ನಿಷ್ಣಾತ. ಪಾರಿವಾಳದ ರೇಸ್, ಪಾರಿವಾಳ ಮಾಂಸದ ಖಾದ್ಯ.. ಎಂದೆಲ್ಲ ಬಾಯಲ್ಲಿ ನೀರೂರಿಸಬೇಡಿ. ಭಾರತದಲ್ಲಿ ಗೂಢಚಾರ ಮಾಡಲು ತರಬೇತಿ ಪಡೆಯುತ್ತವಂತೆ ಈ ಪಾಪದ ಪಾರಿವಾಳಗಳು.

ಚೀನಾದ ಬ್ಯುಸಿ ರಸ್ತೆಯೊಂದರಲ್ಲಿ ಹೊರಾಂಗಣ ಜಾಹೀರಾತು ಫಲಕದ ಮೇಲೆ ಅಶ್ಲೀಲ ವಿಡಿಯೋಗಳು ಒಂದೆರಡು ನಿಮಿಷವಲ್ಲ, ಒಂದೂವರೆ ಗಂಟೆ ಕಾಲ ಹರಿದಾಡಿದವಂತೆ. ರಾತ್ರಿ ಈ ಫಲಕ ಹಾಗೂ ಕಂಪ್ಯೂಟರ್ ಸಂಪರ್ಕ ಬಂದ್ ಆಗಿದೆ ಎಂದುಕೊಂಡ ಉದ್ಯೋಗಿಯೊಬ್ಬ ವಿರಾಮದ ಸಮಯವನ್ನು ಸದುಪಯೋಗಪಡಿಸಿಕೊಳ್ಳಲು ನಿರ್ಧರಿಸಿ ಕಂಪ್ಯೂಟರ್ ಮೇಲೆ ತನ್ನ ಸ್ವಾತಂತ್ರ್ಯವನ್ನು ಹರಿಯಬಿಟ್ಟ. ಓಡಾಡುತ್ತಿದ್ದ ಜನ ಸ್ಕ್ರೀನ್ ಷಾಟ್ ತೆಗೆದುಕೊಂಡು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡಿದರಂತೆ. ಈಗ ಕೆಲಸ ಕಳೆದುಕೊಂಡ ಉದ್ಯೋಗಿಗೆ ಕಾಲ ಕಳೆಯಲು ದಂಡಿಯಾಗಿ ಬಿಡುವಿದೆ.